# ಅಬ್ಬಾ..ಹುಂಜದ ಬಾಲ!





ಎಷ್ಟು ಉದ್ದದ ಪಕ್ಷಿಯ ಬಾಲವನ್ನು ನೀವು ನೋಡಿದ್ದೀರಿ? ಬಹಳವೆಂದರೆ ನಾಲ್ಕೈದು ಅಡಿ ಇದ್ದೀತು. ಇಲ್ಲೊಂದು ಹುಂಜವಿದೆ. ಅದರ ಬಾಲದ ಉದ್ದ ಎಷ್ಟು ಗೊತ್ತೇ? ಬರೋಬ್ಬರಿ 34 ಅಡಿ!

ಜಪಾನಿನ ಈ ಹುಂಜದ ಹೆಸರು ಅನಾಗಡೋರಿ. ಜಪಾನಿ ಭಾಷೆಯಲ್ಲಿ ಗೌರವಾನ್ವಿತ ಹುಂಜ ಎಂದರ್ಥ. ಇದು ಸಾಕಿದ ಕೋಳಿ ಮತ್ತು ಹುಂಜದ ತಳಿಯಾಗಿದೆ. ಇದರ ಬಾಲದ ಉದ್ದ ಇದೀಗ ದಾಖಲೆಯಾಗಿದೆ. ಬಿಳಿ, ಕಪ್ಪು, ಕೆಂಪು ಮತ್ತು ರಜತ ವರ್ಣದಲ್ಲಿ ಹುಂಜ ಕಂಗೊಳಿಸುತ್ತದೆ. ಈ ಹುಂಜಗಳನ್ನು ವಿಶೇಷ ಪಂಜರಗಳಲ್ಲಿ ಬೆಳೆಸಲಾಗುತ್ತದೆ. ಬಾಲದ ರೆಕ್ಕೆ ಪುಕ್ಕಗಳನ್ನು ಸುರುಳಿಯಾಗಿ ಸುತ್ತಿ ಗೋಡೆಯ ಮೇಲೆ ಮೊಳೆಗೆ ಇಳಿ ಬಿಡಲಾಗುತ್ತದೆ. ಹತ್ತು ವರ್ಷಗಳಲ್ಲಿ ಹುಂಜದ ಬಾಲ ಇಷ್ಟು ಉದ್ದ ಬೆಳೆಯುತ್ತದೆ.

ಕ್ರಿ.ಶ. 1600–1868 ರ ಅವಧಿಯಲ್ಲಿ ಶೋಕೋಕು ತಳಿಯ ಉತ್ಪರಿವರ್ತನೆಯ ಫಲವೇ ಈ ಹುಂಜ ಎಂದು ನಂಬಲಾಗಿದೆ. ಜಪಾನ್ ಹೊರತುಪಡಿಸಿ ಬೇರೆ ದೇಶಗಳಲ್ಲಿ ಈ ಹುಂಜ ಕಂಡುಬರುವುದಿಲ್ಲ. ಜಪಾನಿನಲ್ಲಿ ಮಾತ್ರ ಇದನ್ನು ಸಂರಕ್ಷಿಸಲಾಗಿದೆ.

★ ಪ್ರಕಾಶ ಎಸ್.ಮನ್ನಂಗಿ